

ಕಲೆ: ರಾಜಾ ರವಿವರ್ಮ (ಕೃಪೆ: ವಿಕಿಕಾಮನ್ಸ್)

ಗೊತ್ತಾಗಲಿಲ್ಲ. ಅದು ದೇವಸಭೆ, ಪ್ರಪಂಚಕ್ಕೇ ಮಾದರಿಯಾದ ನಡತೆ–ಸಭ್ಯತೆ ಅಲ್ಲಿಯದಲ್ಲವೆ? ಸಭೆಯಲ್ಲಿ ಸೇರಿದವರೆಲ್ಲ ಕಣ್ಣು ಮುಚ್ಚಿದರು. ಹೆಣ್ಣಿನ ಅರೆನಗ್ನ ಸ್ಥಿತಿಯನ್ನು ಸುಸಂಸ್ಕೃತರು ನೋಡಬಾರದಲ್ಲ. ಹಾಂ, ಅದು ಅಲ್ಲಿನ ಅಥವಾ ಎಲ್ಲೆಡೆಯ ಅಲಿಖಿತ ನಿಯಮ.

ಸಭೆಯ ಗಣ್ಯರ ವೇದಿಕೆಯ ಮೇಲೆ ಆತ ಕುಳಿತಿದ್ದ. 'ಅಂದದ ಅವನ್ಯಾರೆ?' ಕೇಳಿದೆ ಗೆಳತಿ ಮಾಲಿನಿಯ ಬಳಿ.

'ಆತ ಇಕ್ಷ್ವಾಕು ವಂಶದ ನರಪ ಮಹಾಭಿಷ' ಎಂದಳು ಆಕೆ.

ಮನಮೋಹಕ ರೂಪಿನ, ಸುರಸುಂದರಾಂಗ ಮಹಾಭಿಷ ದೊರೆಯನ್ನು ನೋಡಿದ ನಾನು ಅವನಲ್ಲಿ ಮೋಹಿತಳಾಗಿಬಿಟ್ಟಿದ್ದೆ. ಆತನೋ ಹದಿಹರೆಯದ ತರುಣನಂತೆ ಕಾಣುವ, ಮರ್ತ್ಯಲೋಕದ ಮನ್ಮಥ. ಪುಣ್ಯದ ಬಲದಿಂದ ಬ್ರಹ್ಮಲೋಕ ಸೇರಿದ ಭೂನಾಥ!

ಆತನೂ ನನ್ನನ್ನೇ ಎವೆಯಿಕ್ಕದೇ ನೋಡುತ್ತಿದ್ದ. ನಾಲ್ಕೂ ಕಣ್ಣುಗಳೂ ಒಂದಾದವು. ಅದೋ ವಿಶಾಲವಾದ ಸಭಾಂಗಣ. ಸೃಷ್ಟಿಕರ್ತ ಬ್ರಹ್ಮನೇ ಕರೆದಿರುವ ವಿಶ್ವವಿಖ್ಯಾತ ದೇವಸಭೆ! ಬಹು ಸುಂದರವಾದ ಕಮಲಪುಷ್ಪದ ಮೇಲೆ ಬ್ರಹ್ಮ, ಅವನ ಪಕ್ಕದಲ್ಲೇ ವೀಣಾಪಾಣಿ, ವಿದ್ಯಾರಾಣಿ ಶಾರದೆ. ಅನತಿ ದೂರದಲ್ಲಿ ಶಚೀದೇವಿಯೊಂದಿಗೆ ವಿರಾಜಮಾನನಾದ ದೇವೇಂದ್ರ. ಪಕ್ಕದಲ್ಲಿಯೇ ಆಚಾರ್ಯ ಬೃಹಸ್ಪತಿ. ಋಷಿ ಗಡಣ. ಎರಡೂ ಸಾಲಿನಲ್ಲಿ ಅಷ್ಟದಿಕ್ಪಾಲಕರು, ಯಕ್ಷ–ಗಂಧರ್ವ–ಕಿನ್ನರ–ಕಿಂಪುರುಷರು. ಕಿಕ್ಕಿರಿದು ನೆರೆದ ದೇವತಾ ವೃಂದ! ಎಲ್ಲರೂ ಕಣ್ಣುಮುಚ್ಚಿದ್ದಾರೆ. ನಾವಿಬ್ಬರು ಮಾತ್ರ ಅನಿಮಿಷರಾಗಿ ಎವೆಯಿಕ್ಕದೆ ನೋಡುತ್ತಿದ್ದೇವೆ.

ಒಮ್ಮೆಲೆ ಅಧ್ಯಕ್ಷ ಪೀಠದಿಂದ ದನಿಯೊಂದು ತೂರಿಬಂತು. ಚತುರ್ಮುಖನ ಗಂಭೀರ ವಾಣಿ. ಅದು ಎಂದಿನ ಮೃದುಲ ದನಿಯಲ್ಲ. ಆಣೆ ಕಲ್ಲಿನಿಂದ ಕೂಡಿದ ದೊಡ್ಡ ದೊಡ್ಡ ಮಳೆಹನಿಗಳು ಬಿದ್ದಂತೆ ಕೋಪಲಿಪ್ತ ನುಡಿಗಳ ಸರಣಿ. 'ಗಂಗೆ, ನೀನು ಔಚಿತ್ಯ ಮೀರಿದೆ. ಇದು ವಿಶ್ವವೇ ನಿರುಕಿಸುವ ಮಾದರಿ ದೇವಸಭೆ. ಅಮರ ವೃಂದದ ನಡೆ–ನುಡಿ, ರೀತಿ–ನೀತಿ ನಿಂದಿತವಾದರೆ? ಸುಜ್ಞಾನಿಗಳ ನೀತಿವಂತರ ಎದುರು ನಡೆಯಬಾರದ ಅನುಚಿತ ವರ್ತನೆ ಇದು'. ಹೀಗೆ ನುಡಿದು ಅವನತ್ತ ತಿರುಗಿ, 'ಮಹಾಭಿಷ, ನಿನ್ನ ಬ್ರಹ್ಮಲೋಕವಾಸ ಪುಣ್ಯ ನಿರಸ್ತವಾಯಿತು. ಪರಸ್ಪರ ಮೋಹಿತರೂ, ಅನುರಕ್ತರೂ ಆದ ನೀವಿಬ್ಬರೂ ಮರ್ತ್ಯಲೋಕದಲ್ಲಿ ಜನಿಸಿ'. ಚತುರ್ಮುಖ ಬ್ರಹ್ಮ ಶಾಪವಿತ್ತ. ಕಾಮಮೋಹಿತ ಚಿತ್ತಕ್ಕೆ ಹೀಗೆ ಫಲವಿತ್ತ. ಇದು ನ್ಯಾಯಾಧಿಪತಿ ನಮಗೆ ಕೊಟ್ಟ ಶಿಕ್ಷೆ ಅಥವಾ ಒಂದು ರೀತಿಯ ಅನುಗ್ರಹವೆ?

ತಕ್ಷಣ ನಾನು ಜಾಗೃತಳಾದೆ. ನನ್ನ ತಪ್ಪಿನ ಅರಿವಾಗಿ ಬ್ರಹ್ಮನ ಚರಣಗಳಿಗೆ ಮಣಿದು 'ಕ್ಷಮಿಸಿ ದೇವಾ, ಒಂದು ಕ್ಷಣ ಅರಿಯದೇ ಆಗಿರುವ ಅಚಾತುರ್ಯವ' ಎಂದು ಬೇಡಿಕೊಂಡೆ, ಮನದಲ್ಲಿ ಮಹಾಭಿಷನ ಹೊಂದುವ ಅನುರಾಗವೂ ಇತ್ತು. ಬೇಗ ಮರಳಿ ದೇವಲೋಕ ಸೇರುವ ಭಾವವೂ ಇತ್ತು!

ಬ್ರಹ್ಮ ನಮ್ಮ ವಿಧಿ, ನಮ್ಮ ಧಣಿ ಅಲ್ಲವೆ? ಕರಗಿದ ಕರುಣಾಳು ಉಶ್ಶಾಪದ ಅನುಗ್ರಹ ಗೈದ. 'ಪ್ರಮಾದಕ್ಕೆ ಪ್ರಾಯಶ್ಚಿತ್ತ ಅನಿವಾರ್ಯ. ಚಂದದ ಭೂಮಿಯಲ್ಲಿ ಜನ್ಮತಾಳು. ಪರಮಸುಂದರಿಯೆನಿಸಿ, ಯಾರನ್ನು ಮೋಹಿಸಿದೆಯೋ ಅವನನ್ನು ಮದುವೆಯಾಗು. ನಿನಗಿಷ್ಟವಿರುವಷ್ಟು ಕಾಲ, ನಿನ್ನಿಷ್ಟದಂತೆ ಸಂಸಾರ ನಡೆಸು. ಕ್ಷಿಪ್ರವಾಗಿಯೇ ಬ್ರಹ್ಮಲೋಕಕ್ಕೆ ಮರಳು' ಎಂದು.

ಮರುಕ್ಷಣವೇ ನಾವಿಬ್ಬರೂ ಅಲ್ಲಿಂದ ಮಾಯವಾಗಿದ್ದೆವು! ಮಹಾಭಿಷ ಹಸ್ತಿನಾವತಿಯಲ್ಲಿ ಪ್ರತೀಪ ರಾಜನ ಮಗನಾಗಿ ಹುಟ್ಟಿ 'ಶಂತನು' ಅಭಿಧಾನದಿಂದ ಖ್ಯಾತನಾದನು. ನಾನು, ಈ ಮೊದಲೇ ಅನಂತಕಾಲದಿಂದ ಗಂಗಾ ಎಂಬ ನಾಮಾಂಕಿತೆ ನದಿಯಾಗಿ ಹರಿಯುತ್ತಿದ್ದೆನಲ್ಲ... ಅದರ ತೀರದಲ್ಲಿಯೇ, ಹದಿಹರೆಯದ ಚೆಲುವೆಯ ರೂಪಾಂತು, ಹರಿದ್ವರ್ಣದ ಸಾನು ಪ್ರದೇಶದಲ್ಲಿ ಅಡ್ಡಾಡುತ್ತ ನಲಿಯುತ್ತಿದ್ದೆ. ಹಸ್ತಿನಾವತಿಯಿಂದ ಈ ವನದ ತಪ್ಪಲು ಬಹಳ ದೂರವೇನಿರಲಿಲ್ಲ. ರಾಜಕುಮಾರ ಶಂತನು ಇಲ್ಲಿಗೆ ಬೇಟೆಯ ನೆಪದಲ್ಲಿ ನಿಯಮಿತವಾಗಿ ಬರುವುದನ್ನು ನಾನು ಗಮನಿಸಿದ್ದೆನಲ್ಲ! ಬ್ರಹ್ಮನ ನಿಯಮ. ಋಣಾನುಬಂಧದ ಯೋಗಾಯೋಗ. ಹೆಣೆಯಿತು ನಮ್ಮ ಪ್ರೇಮಾನುಬಂಧ.

ಅರ್ಥವಾಯಿತೆ? ಶಂತನು ಬರುತ್ತಿದ್ದ ಬೇಟೆಗೆ. ನಿರ್ದಿಷ್ಟಪಡಿಸಿದ ಚತುರಂಗಬಲದೊಡನೆ ನಾನಿದ್ದೆಡೆಗೆ. ಅವನಿಗೆ ಕಾಣಿಸಿಕೊಳ್ಳಲೆಂದೇ ವನಸುಮಗಳನಾಯ್ದ ವ್ಯಾಜದಿಂದ ಹರಿಣಿಯಂತೆ ಅವನತ್ತ ನಾನೂ ನಿಧಾನ ಸರಿಯುತ್ತಿದ್ದೆ... ನನ್ನನ್ನು ಕಂಡು ಅವನು ಸಂಪೂರ್ಣ ಮನಸೋತಿದ್ದ. ನಾನೂ ಅನುರಕ್ತಳಾಗಿದ್ದೆನಲ್ಲ. ಅವನು ದಣಿದಾಗ ವಿಶ್ರಮಿಸಲು ಆಸರೆಯಾದೆ, ಆಸರಿಕೆಯಾದಾಗ ಗಂಗಾಜಲ ಹನಿಸಿದೆ. ಆಮೇಲಾಮೇಲೆ ಚತುರಂಗ ಬಲವನ್ನು ದೂರವೇ ಬಿಟ್ಟು, ಒಂಟಿಯಾಗಿ ನನ್ನನ್ನು ಹುಡುಕಿಕೊಂಡು ಆತ ಬರತೊಡಗಿದ. ನಮ್ಮಿಬ್ಬರಲ್ಲಿ ಪ್ರೇಮಾಂಕುರವಾಗಿ ಅರಳಿ ಹೂವಾಗಿ ಪರಿಮಳಿಸತೊಡಗಿತು. ಶಂತನು ಕುಮಾರ ಒಂದು ದಿನ ಪ್ರಣಯ ಭಿಕ್ಷೆ ಬೇಡಿದ. ನಾನೂ ಅವನು ಕೇಳುವುದನ್ನೇ ಕಾಯುತ್ತಿದ್ದೆ. ಮುಗುಳ್ನಕ್ಕೆ; ಲಜ್ಜಾಲಂಕೃತ ಅಪಾಂಗಲೋಚನದಿಂದ ಸಮ್ಮತಿಯ ಕಿರುನೋಟ ಬೀರಿದೆ... 'ಮಹಾಭಿಷ'ನನ್ನು ಕೂಡುವ ಅಭಿಲಾಷೆ ನನ್ನದೂ ಆಗಿತ್ತಲ್ಲ!

ಆದರೆ ನನಗೆ ನಾನು ಸ್ವರ್ಗ ಮತ್ತು ಬ್ರಹ್ಮಲೋಕಕ್ಕೆ ಮರಳುವ ಗುರಿಯೂ ಪೂರೈಸಬೇಕಿತ್ತು. ಭೂಲೋಕದಲ್ಲಿ ಸಂಸಾರ ಮಾಡುವ ಅಭಿಗ್ರಸ್ತತೆಯೂ ಪೂರ್ಣವಾಗಬೇಕಿತ್ತು. ನಾನು ಇನಿದನಿಯಲ್ಲಿ ನುಡಿದೆ; 'ನಾನು ನಿನ್ನ ಮುದ್ದಿನ ಮಡದಿಯಾಗಿ ಅರಮನೆಗೆ ಕಾಲಿಡುವೆ, ಸಂಸಾರವನ್ನೂ ಮಾಡುವೆ. ಆದರೆ ಹುಟ್ಟಿದ ಮಕ್ಕಳನ್ನು ನಾನು ಗಂಗಾನದಿ — ನನ್ನ ಮಡಿಲಲ್ಲಿ ತೆಗೆದುಕೊಂಡು ಮುಕ್ತಿಕೊಡುವೆ. ನನ್ನ ಇಚ್ಛೆಗೆ ನೀನು ವಿರುದ್ಧ ಬಂದ ದಿನ ಅಂದರೆ ಷರತ್ತು